



# ಭಗವನ್ನಾಮದ ಮಹಿಮೆ


ತಮಿಳು ಮೂಲ: ನಿರ್ಮಾಲ್ಯಂ   ಕನ್ನಡಕ್ಕೆ : ರಾಘವೇಶಾನಂದ
ಚಿತ್ರ : ಶಂಕರ್




ಹೆಸರನ್ನು ಕೇಳಿದುದೇ ತಡ, ಆ ಚಿಟ್ಟೆಯೂ ಸತ್ತುಬಿದ್ದಿತು.
4
ಚಿಟ್ಟೆಯೂ ಸತ್ತಿತೇ? ಸರಿ ಈಗ ತಾನೇ ಹುಟ್ಟಿರುವ ಆ ಜಿಂಕೆಮರಿಯನ್ನು ನೋಡು. ಅದರ ಕಿವಿಯಲ್ಲಿ ನನ್ನ ನಾಮವನ್ನು ಉಚ್ಚರಿಸಿ ನೋಡು.
5
ನಾರಾಯಣ! ನಾರಾಯಣ!
ಆ ಜಿಂಕೆ ಮರಿಯೂ ತಕ್ಷಣ ಸತ್ತಿತು.
6
ಸ್ವಾಮಿ, ಹುಳು,ಚಿಟ್ಟೆ, ಮತ್ತೆ ಜಿಂಕೆಮರಿಯೂ ಸತ್ತಿತು. ಇದರ ಹಿಂದಿನ ನಿನ್ನ ಲೀಲೆ ನನಗೆ ಅರ್ಥವಾಗುತ್ತಿಲ್ಲ.
ಓ ದೇವ, ಇದಕ್ಕಿಂತ ಹೆಚ್ಚು ನನ್ನನ್ನು ಪರೀಕ್ಷಿಸಬೇಡ. ಇದೇ ನನ್ನ ಕೊನೆಯ ಪರೀಕ್ಷೆ
ಅಷ್ಟು ಬೇಗ ನಿರಾಶೆಗೊಳ್ಳುತ್ತಿದ್ದೀಯಲ್ಲಾ? ಆ ಕರುವನ್ನು ನೋಡು ಕಿವಿಯಲ್ಲಿ ನನ್ನ ಹೆಸರನ್ನು ಉಚ್ಚರಿಸು.
ನಾರಾಯಣ! ನಾರಾಯಣ!
7
ಅಂಬಾ! ಅಂಬಾ!


ಆ ಕರುವೂ ತನ್ನ ಕೊನೆಯುಸಿರೆಳೆಯಿತು.
ದೇವಾ, ಎಲ್ಲರನ್ನೂ ರಕ್ಷಿಸುವ ಹೆಸರು ಈಗ ಎಲ್ಲರನ್ನೂ ಕೊಲ್ಲುತ್ತಿದೆ.
ಓ ನಾರದ, ಅಷ್ಟೇಕೆ ಉದ್ವಿಗ್ನನಾಗುವೆ? ಕಾಶಿರಾಜನಿಗೆ ಈಗ ತಾನೆ ಒಬ್ಬ ಮಗ ಹುಟ್ಟಿದ್ದಾನೆ.ಆ ಮಗುವಿನ ಕಿವಿಯಲ್ಲಿ ನನ್ನ ಹೆಸರನ್ನು ಹೇಳಿ ನೋಡು.
8
ಸ್ವಾಮಿ,ನನಗೆ ಆಗಲೇ ಪ್ರಪಂಚದಲ್ಲಿ 'ಜಗಳ ತಂದುಹಾಕುವವನು'ಎಂಬ ಕೆಟ್ಟಹೆಸರಿದೆ.ಈಗ ಕೊಲೆಗಾರ'ಎಂಬ ಪಟ್ಟವನ್ನೂ ಕಟ್ಟುವರು.
9
ನಾರದ, ಇದೇ ಕೊನೆ. ಬಾರಿ. ಆ ಮಗುವಿನ ಕಿವಿಯಲ್ಲಿ ನನ್ನ ನಾಮವನ್ನು ಉಚ್ಚರಿಸು.
ಅದೇ ರೀತಿ ನಾರದ ಕಾಶಿರಾಜನ ರಾಜ್ಯಕ್ಕೆ ಹೋದ. ಮಹಾರಾಜ ನಾರದನನ್ನು ಗೌರವದಿಂದ ಸ್ವಾಗತಿಸಿದ.
ಸ್ವಾಮಿ,ನನ್ನ ಮಗುವಿನ ಜನ್ಮದಿನದಂದು ಬಂದು ನನ್ನನ್ನು ಧನ್ಯನನ್ನಾಗಿ ಮಾಡಿದಿರಿ. ಅವನೊಬ್ಬ ದೊಡ್ಡ ವೀರನಾಗುವಂತೆ ಆಶೀರ್ವದಿಸಿ.
10
ನಾರಾಯಣ! ನಾರಾಯಣ!
ಏನಾಶ್ಚರ್ಯ! ಭಗವಂತನ ಹೆಸರನ್ನು ಕೇಳುತ್ತಲೇ ಆ ಮಗು ಮಾತನಾಡಲಾರಂಭಿಸಿತು.
11
ಮಹರ್ಷಿ,ವಂದನೆಗಳು. ಇನ್ನೂ ತಮಗೆ ಭಗವನ್ನಾಮದ ಮಹಿಮೆ ಅರ್ಥವಾಗಲಿಲ್ಲವೇ?
12
ನನಗೆ ಅರ್ಥವಾಗಲಿಲ್ಲ ಮಗು.ದಯವಿಟ್ಟು ವಿವರಿಸು.
ನಾನು ಆರಂಭದಲ್ಲಿ ಒಂದು ಕೀಟವಾಗಿದ್ದೆ. ಭಗವಂತನ ಹೆಸರನ್ನು ಕೇಳಿದ ನಂತರ ಸತ್ತು ಚಿಟ್ಟೆಯಾದೆ.ಮತ್ತೆ 'ನಾರಾಯಣ' ಎಂದು ಕೇಳಿದ ಮೇಲೆ ಸತ್ತು ಜಿಂಕೆಯಾದೆ. ಮತ್ತೊಮ್ಮೆ ಆ ಹೆಸರು ಕಿವಿಗೆ ಬಿದ್ದಮೇಲೆ ಕರುವಾದೆ. ಕಡೆಗೆ, ಭಗವಂತನ ಕೃಪೆಯಿಂದ ಶ್ರೇಷ್ಠವಾದ ಮಾನವಜನ್ಮ ಸಿಕ್ಕಿತು. ಇದೇ ಭಗವನ್ನಾಮ ಶ್ರವಣದ ಫಲ.